ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 3, November-December, 2023, Pp. 117-121.
©*IIMRD*, Mysuru
IIMRD JOURNALS
www.iimrd.com

# ಕೆ. ನೀಲಾ ಅವರ ಸಾಹಿತ್ಯ ಮತ್ತು ಸಾಧನೆ

**ಡಾ. ಸೌಭಾಗ್ಯ ಶಿವಪುತ್ರಪ್ಪ***

*ಕನ್ನಡ ಅತಿಥಿ ಪ್ರಾಧ್ಯಾಪಕರು, ಶರಣ ಸಾಹಿತ್ಯ ಗ್ರಂಥಾಲಯ ಮತ್ತು ಸಂಪನ್ಮೂಲ ಕೇಂದ್ರ, ಬಸವಕಲ್ಯಾಣ, ಬೀದರ.

**ಸಾರಾಂಶ: (Abstract)**

*ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯು ಹಲವು ಮಹತ್ವದ ಘಟ್ಟಗಳನ್ನು ಹಾಗೂ ಸಾಹಿತ್ಯಕ ಸಾಂಸ್ಕೃತಿಕ ಚಳುವಳಿಗಳನ್ನು ಹುಟ್ಟು ಹಾಕಿಕೊಂಡು ಬಂದಿದೆ. ಹಲವಾರು ಕವಿಗಳು, ಕಥೆಗಾರರು, ಕಾದಂಬರಿಕಾರರು, ನಾಟಕಕಾರರು, ಚಿಂತಕರು ಮೌಲಿಕ ಚಿಂತನೆಗಳನ್ನು ಬಿತ್ತಿದ್ದಾರೆ. ಅಂತಹ ಲೇಖಕ ಮತ್ತು ಕಥೆಗಾರ್ತಿ, ಮುಂಚೂಣಿ ಮಹಿಳಾ ಹೋರಾಟಗಾರ್ತಿ ಎಂದೇ ಪ್ರಸಿದ್ಧಿಯನ್ನು ಪಡೆದವರು ಕೆ.ನೀಲಾ. ಈ ಲೇಖನದಲ್ಲಿ ಕೆ.ನೀಲಾ ಅವರ ಸಾಹಿತ್ಯ ಮತ್ತು ಸಾಧನೆಯನ್ನು ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಮಹಿಳಾ ಸಾಹಿತಿ, ಮಹಿಳಾ ಹೋರಾಟಗಾರರು.

## ಪೀಠಿಕೆ

ಕಲ್ಯಾಣ ಕರ್ನಾಟಕ ಭಾಗದ ವಿಶಿಷ್ಟವಾದ ಬಹುಮುಖ ಪ್ರತಿಭೆಯುಳ್ಳ ಕನ್ನಡದ ಸಣ್ಣ ಕಥೆಗಾರ್ತಿ ಕೆ. ನೀಲಾ ಅವರು ಕಾಶಿನಾಥ ಸ್ವಾಮಿ ಮತ್ತು ಚೆನ್ನಮ್ಮ ದಂಪತಿಗಳ ನಾಲ್ಕನೆ ಮಗಳಾಗಿ 21ನೇ ಆಗಸ್ಟ್ 1966ರಲ್ಲಿ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿ ಜನಿಸಿದರು. ಇವರದು ಅಪ್ಪಟ ಸಂಪ್ರದಾಯಸ್ಥ ಕುಟುಂಬ. ಹೆಣ್ಣುಮಕ್ಕಳು ಮನೆಯಿಂದ ಹೊರಗೆ ಹೋಗಬಾರದು, ಗಂಡಸರ ಜೊತೆ ಮಾತನಾಡಬಾರದು ಎನ್ನುವುದು ತಂದೆ–ತಾಯಿಗಳ ವಿಚಾರವಾಗಿತ್ತು. ಇಂತಹ ವ್ಯತಿರಿಕ್ತ ಮನೆತನದಲ್ಲಿ ಹುಟ್ಟಿ ಬೆಳೆದ ಕೆ. ನೀಲಾ ಬಾಲ್ಯದಲ್ಲಿ ಬಹಳ ಬುದ್ಧಿವಂತೆ. ಕಾಶಿನಾಥ ಸ್ವಾಮಿಯವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಒಳ್ಳೆಯ ಸಾಹಿತ್ಯ, ಸಂಸ್ಕೃತಿಯನ್ನು ಹೊಂದಿದ್ದರು. ಕಮ್ಯುನಿಸ್ಟ್‌ವಾದಿಯಾಗಿದ್ದ ಕಾರಣ, ಜಾತಿ, ಅಸಮಾನತೆಯ ವಿರುದ್ಧ ಯಾವುದೇ ದೇವರು ದಿಂಡಿರುಗಳನ್ನು ನಂಬುತ್ತಿರಲಿಲ್ಲ. ಯಾವಾಗಲೂ ವೈಚಾರಿಕವಾಗಿ ಮಾತನಾಡುವ ಗುಣಗಳೇ ಕೆ. ನೀಲಾ ಅವರ ಮೇಲೆ ಪ್ರಭಾವ ಪ್ರೇರಣೆ ಬೀರಿದವು. ಮುಂದೆ ಕೆ. ನೀಲಾ ಅವರು ಚಿಕ್ಕ ವಯಸ್ಸಿನಲ್ಲಿರುವಾಗಲೇ ಪುಸ್ತಕ, ಕಥೆ ಮತ್ತು ಪತ್ರಿಕೆಗಳನ್ನು ಓದುವ ಹವ್ಯಾಸ ರೂಢಿಸಿಕೊಂಡಿದ್ದರು. ಹೀಗಾಗಿ ಸಾಮಾಜಿಕ ಸುಧಾರಕರಾದ ಬುದ್ಧ, ಬಸವಾದಿ ಶರಣರ, ಜೋತಿಬಾಪುಲೆ, ಸಾವಿತ್ರಿಬಾ ಫುಲೆ, ಅಂಬೇಡ್ಕರ್, ಲೋಹಿಯಾ ವಿಚಾರಧಾರೆ, ಚಿಂತನೆಗಳ ಪ್ರಭಾವಕ್ಕೊಳಗಾದರು. ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್‌ನ ಜೀವನ ವಿಧಾನ ಇವರ ಮೇಲೆ ಪರಿಣಾಮ ಬೀರಿತು.

ಮನೆಯಲ್ಲಿ ಇವರ ತಂದೆ ಬುದ್ಧ, ಬಸವ, ಅಂಬೇಡ್ಕರ್‌ರಂತಹ ದಾರ್ಶನಿಕ ಚಿಂತಕರ ವಿಚಾರಗಳನ್ನು ಸಾಮಾಜಿಕ, ರಾಜಕೀಯ ಚಿಂತನೆಗಳ ಕುರಿತು ಕೆ. ನೀಲಾ ಅವರಿಗೆ ಹೇಳುವುದು ಅಷ್ಟೇ ಅಲ್ಲ ಚರ್ಚೆ ಕೂಡ

*Please cite this article as:* ಸೌಭಾಗ್ಯ ಶಿವಪುತ್ರಪ್ಪ. (2023). ಕೆ. ನೀಲಾ ಅವರ ಸಾಹಿತ್ಯ ಮತ್ತು ಸಾಧನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(3). ಪು.ಸಂ.* 117–121.

ಮಾಡುತ್ತಿದ್ದರು. ತಾಯಿ ಚೆನ್ನಮ್ಮ ಬಸವಾದಿ ಶರಣರ ವಚನಗಳು ಮತ್ತು ತತ್ವಪದಗಳನ್ನು ಹಾಡುತ್ತಿದ್ದರು ಹೀಗಾಗಿ ಪರಿಚಯವಾದವು. ಬಾಲ್ಯದಲ್ಲಿಯೇ ಈ ಸಮಾಜದಲ್ಲಿನ ಅನ್ಯಾಯ, ಅಸಮಾನತೆ, ಲಿಂಗಭೇದ, ಶೋಷಣೆ, ತಾರತಮ್ಯ ವಿರುದ್ಧ ಹೋರಾಡಬೇಕು. ಎಲ್ಲರೂ ಒಂದಾಗಿ ಜಾತಿ, ಮತ–ಪಂಥವೆನ್ನದೆ ಒಳ್ಳೆಯ ಮನೋಭಾವ ವೈಚಾರಿಕತೆ ಸ್ವಭಾವದಿಂದ ಬಾಳಬೇಕೆನ್ನುವ ಗುರಿ ಕೆ. ನೀಲಾ, ಅವರದಾಗಿತ್ತು. ಇವರ ಶಿಕ್ಷಣಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಬಸವೇಶ್ವರ ಪ್ರಾಥಮಿಕ ಶಾಲೆಯಲ್ಲಿ 1ನೇ ತರಗತಿಯಿಂದ 7ನೇ ತರಗತಿಯವರೆಗೆ ಪಾಥಮಿಕ ಶಿಕ್ಷಣ ಪೂರೈಸಿ ಮುಂದೆ ಎಳನೇ ತರಗತಿಯಿಂದ 9ನೇ ತರಗತಿ ನೀಲಾಂಬಿಕಾ ಪ್ರೌಢಶಾಲೆಯಲ್ಲಿ ಹಾಗೂ 10ನೇ ತರಗತಿ, ಸರಕಾರಿ ಪ್ರೌಢಶಾಲೆ ಬೀದರನಲ್ಲಿ ಪಡೆದುಕೊಂಡರು. ಪಿ.ಯು.ಸಿ, ವಿಜ್ಞಾನ ವಿಭಾಗದಲ್ಲಿ ಖೂಬಾ ಕಾಲೇಜು ಬಸವಕಲ್ಯಾಣದಲ್ಲಿ ವಿದ್ಯಾಭ್ಯಾಸ ಕೈಗೊಂಡರು. ಆದರೆ ಗಣಿತ ವಿಷಯದಲ್ಲಿ ಅನುತ್ತೀರ್ಣರಾದ ಕಾರಣ ಅವರ ವಿದ್ಯಾಭ್ಯಾಸ ಕುಂಠಿತಗೊಂಡಿತು ಈ ಕಾರಣಕ್ಕಾಗಿ ಮನೆಯಲ್ಲಿ ಇರುವುದರಿಂದ ಏನಾದರೂ ಸಾಧನೆ ಮಾಡಬೇಕೆಂಬ ಛಲ ಇವರಲ್ಲಿ ಕಂಡುಬಂತು. ಹಾಗಾಗಿ ಬೀದರನ 'ಕಾರಾಂಜಾ' ಪೇಪರ್ ಮಿಲ್‌ನಲ್ಲಿ ಟೈಪಿಸ್ಟ್ ಆಗಿ ಸೇವೆ ಆರಂಭಿಸಿದರು. ಅಷ್ಟೇ ಅಲ್ಲದೆ ಸಮುದಾಯ ಸಂಘಟನೆಗಳಲ್ಲಿ ಆಗಾಗ ಭಾಗವಹಿಸಿದರು. ನಂತರ 1989ರಲ್ಲಿ ಮೈಸೂರು ಮಾನಸ ಗಂಗೋತ್ರಿ ಮುಕ್ತ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿ ಪೂರೈಸಿಕೊಂಡರು. ಮುಂದೆ ಆಲ್ ಇಂಡಿಯಾ ಕಾನ್ಸರೆನ್ಸ್‌ನಲ್ಲಿ ಭಾಗವಹಿಸಿ' ಇವತ್ತಿನವರೆಗೂ ನೂರಾರು ಸಂಘಟನೆಗಳಲ್ಲಿ ಸಕ್ರೀಯವಾಗಿ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದಾರೆ. ಪರಿಶ್ರಮ, ಪ್ರಯತ್ನಗಳಿಂದಾಗಿ ಅನೇಕ ಕ್ಷೇತ್ರಗಳಲ್ಲಿ ಒಲವು ಇದ್ದುದರಿಂದ ಎಲ್ಲ ಕ್ಷೇತ್ರಗಳಲ್ಲಿಯೂ ತೊಡಗಿಸಿಕೊಂಡರು. 'ಕಷ್ಟಪಟ್ಟವಳಿಗೆ ಸುಖ ಉಂಟು' ಎಂಬ ನುಡಿಯಂತೆ ಜೀವನ ನಡೆಸಿದರು. ಕೆ. ನೀಲಾ ಅವರದು ಬಹಳ ಸರಳ ಸಜ್ಜನಿಕೆಯ, ಸ್ನೇಹ ಜೀವಿಗಳು ಎಲ್ಲರನ್ನು ತನ್ನವರೆಂದು ಆತ್ಮೀಯತೆಯಿಂದ ಕಾಣುತ್ತಿದ್ದರು. 'ಇವನಾರವ, ಇವನಾರವ ಎನ್ನದೆ, ಇವ ನಮ್ಮವ ಇವ ನಮ್ಮವ' ಎಂದುಕೊಳ್ಳುವ ವಿಶ್ವಾಸ, ಪ್ರೀತಿ ಅವರ ನಡೆನುಡಿಗಳಲ್ಲಿ ತುಂಬಿ ತುಳುಕುತ್ತಿತ್ತು. ನಗುನಗುತ್ತ ಎಲ್ಲರೊಂದಿಗೆ ಬೆರೆತು ಮಾತನಾಡುವ ಕೆ. ನೀಲಾ ಮತ್ತು ಕೋದಂಡರಾಮ ದಂಪತಿಗಳು ತಮ್ಮ ಒಬ್ಬಳೇ ಮುದ್ದಿನ ಮಗಳಾದ ಲವಿತಳೊಂದಿಗೆ, ಸುಖ ಜೀವನ ನಡೆಸುತ್ತಿದ್ದಾರೆ.

ಕ್ರಿಯಾಶೀಲ ಮನೋಭಾವದ ಲೇಖಕರು, ಕಥೆಗಾರರಾದ ಕೆ. ನೀಲಾ ಅವರು ಲವಲವಿಕೆ ಮತ್ತು ಕಾರ್ಯದಕ್ಷತೆಯ ಸಾಕಾರಮೂರ್ತಿ, ವ್ಯವಹಾರದಲ್ಲಿ ಇರುವ ಶಿಸ್ತಿ ಅವರ ಬರಹದಲ್ಲಿಯೂ ಇದೆ. ಸಾಹಿತ್ಯವನ್ನು ಗ್ರಹಿಸಲು ಅಗತ್ಯವಾದ ಭಾವ–ಬುದ್ಧಿಗಳ ಸಂಗಮ ಅವರಲ್ಲಿದೆ. ಸರಳತೆ, ಸಮತೆ ಅವರ ಗುಣಗಳು ಇವರಲ್ಲಿ ಅಡಗಿವೆ. ಈ ದಿಸೆಯಲ್ಲಿ ಕೆಲವು ಕೃತಿಗಳ ಮೂಲಕ ಸಾಹಿತ್ಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಜ್ಞಾನ ಕ್ಷಿತೀಜಗಳನ್ನು ತೆರೆಯುತ್ತಾ, ಸಂಘಟನಾತ್ಮಕವಾಗಿ 1989 ಮಾರ್ಚ್ 21 ರಂದು ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಬೀದರನಲ್ಲಿ ಆರಂಭಗೊಂಡಿತು. ಜೂನ್ 01 ರಂದು ರೇಷನ್ ಕಾರ್ಡು, ನೀರಿನ ವ್ಯವಸ್ಥೆ, ಶೌಚಾಲಯ, ಸ್ಲಂ ನಿವಾಸಿಗಳಿಗೆ ವಸತಿ ಮತ್ತು ನಾಗರಿಕ ಸೌಲಭ್ಯ ಇತ್ಯಾದಿಗಳನ್ನು ಹಾಗೂ ಹಕ್ಕೊತ್ತಾಯಗಳನ್ನು ಇಟ್ಟುಕೊಂಡು ಹೋರಾಟಕ್ಕಿಳಿದರು. ಬಸ್ಸುಗಳಲ್ಲಿ ಮಹಿಳೆಯರಿಗೆ ಮೀಸಲು ಸೀಟರಿಸಲು ಆಗ್ರಹಿಸಿ ಚಳುವಳಿ, ವರದಕ್ಷಿಣೆ ವಿರೋಧಿ ಆಂದೋಲನಗಳು ಮತ್ತು ಮಹಿಳೆಯರ ಮೇಲಿನ ನಡೆಯುವ ದೌರ್ಜನ್ಯ ವಿರೋಧಿ ಹೋರಾಟಗಳು ನಿರಂತರ ನಡೆಸತೊಡಗಿದರು.

ಸಾಹಿತ್ಯಕ ಚಟುವಟಿಕೆಯಲ್ಲಿ ಮಹಿಳೆಯರನ್ನು ತೊಡಗಿಸಲು ಪ್ರಯತ್ನಿಸಿದರು. ಇದಕ್ಕಾಗಿ ಬಹುಭಾಷಾ ಕವಿಗೋಷ್ಠಿ, ಕೋಮು ಸೌಹಾರ್ದತೆಗಾಗಿ ರಂಗಮೇಳದಂತೆ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಗೊಳಿಸಲು ಶ್ರಮಿಸಿದರು. ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿಶ್ವಸುಂದರಿ ಸ್ಪರ್ಧೆಯನ್ನು ವಿರೋಧಿಸಿ ಹೋರಾಟ ನಡೆಸಿದರು. ದಲಿತ ಮಹಿಳೆ ಮತ್ತು ದೇವದಾಸಿ ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಪ್ರತಿಭಟಿಸಿದರು. 2000 ಫೆಬ್ರವರಿ ತಿಂಗಳಲ್ಲಿ ಜರುಗಿದ ತೊಗರಿ ಕಣಜ ಗುಲಬರ್ಗಾದಲ್ಲಿ ಬೆಂಬಲ ಬೆಲೆ ಕೊಡಬೇಕು, ತೊಗರಿ ಬೋರ್ಡ ರಚಿಸಬೇಕು. ತೊಗರಿ ಆಮದು ನಿಲ್ಲಿಸಬೇಕು ಎಂಬ ಬೇಡಿಕೆಗಳನ್ನು ಇಟ್ಟುಕೊಂಡು ಕರ್ನಾಟಕ ಪ್ರಾಂತ ರೈತ ಸಂಘ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲಿಸಿ ಚಳುವಳಿಯಲ್ಲಿ ಧುಮುಕಿದರು. ಹೋರಾಟದ ಸಂದರ್ಭದಲ್ಲಿ ಪೊಲೀಸ್ ಲಾಠಿ ಚಾರ್ಜ ಎದುರಿಸಬೇಕಾಯಿತು ಮತ್ತು ಬಂಧಿಸಲಾಯಿತು. ಇದಾದ ನಂತರ ಮಹಿಳಾ ಮೀಸಲಾತಿ ಮಸೂದೆ ಜಾರಿಗಾಗಿ ಆಗ್ರಹಿಸಿ ರಾಸ್ತಾರೋಕೋ, ಸಮಾವೇಶಗಳು, ವಿಚಾರ ಸಂಕಿರಣಗಳನ್ನು ಸಂಘಟಿಸಿ ಬಂಧನಕ್ಕೊಳಗಾದರು. ಇದ್ಯಾವುದಕ್ಕೂ ಹೆದರದೆ ಮಹಿಳಾಪರ ಕಾನೂನು ಕಮ್ಮಟ, ಸುಪ್ರೀಂಕೋರ್ಟ ಹಾಗೂ ಹೈಕೋರ್ಟ್ ನ್ಯಾಯಾಧೀಶರನ್ನು ಆಹ್ವಾನಿಸಿ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ 2005 ರಂದು ಮಸೂದೆಯ ಚರ್ಚೆ ನಡೆಸಿದರು. ಮಸೂದೆ ಪಾಸಾದ ನಂತರ ಪ್ರಚಾರಕ್ಕಾಗಿ ಅನೇಕ ಸಂವಾದ ಕಾರ್ಯಕ್ರಮಗಳು ನಡೆದವು. 'ಹೆಣ್ಣು ಮಗು ಉಳಿಸಿ, ಮಾನವ ಕುಲ ರಕ್ಷಿಸಿ' ಎಂಬ ಘೋಷಣೆಯಡಿ ಕವಿಗೋಷ್ಠಿ, ಪುಸ್ತಕ ಪ್ರಕಟಣೆ, ಜಾಗೃತಿ ಸಮಾವೇಶಗಳು, 21 ದಿವಸ ಜಾಥಾ ಹಮ್ಮಿಕೊಳ್ಳಲಾಯಿತು.

ಕನ್ನಡ ವಿಶ್ವವಿದ್ಯಾಲಯ, ಹಂಪಿ ಸಂಯುಕ್ತಾಶ್ರಯದಲ್ಲಿ ಹೆಣ್ಣು ಭ್ರೂಣ ಹತ್ಯೆ ತಡೆ ಕಾರ್ಯಾಗಾರಗಳನ್ನು ನಡೆಸಲಾಯಿತು. ಅಪಮಾನದ ವರದಕ್ಷಿಣೆ ನಿಲ್ಲಿಸಿ, ಸ್ವಾಭಿಮಾನದ ಆಸ್ತಿ ಹಕ್ಕು ಜಾರಿಗೊಳಿಸಿ ಎಂಬ ಘೋಷ ವಾಕ್ಯದೊಂದಿಗೆ ಹಲವಾರು ತಾಲ್ಲೂಕು, ಹಳ್ಳಿಗಳಲ್ಲಿ ಹಮ್ಮಿಕೊಂಡು ಯಶಸ್ವಿಯಾದರು. ವಿಧವೆಯರಿಗೆ ಆಸ್ತಿಯಲ್ಲಿ ಪಾಲು ಕೊಡಲು ಆಗಹಿಸಿದರು. ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಮೂಲಕ ಪ್ರತಿ ತಿಂಗಳ ಎರಡನೆ ಶನಿವಾರದಂದು ಉಚಿತ ಕೌನ್ಸಿಲಿಂಗ್ ನಡೆಸುತ್ತಾ, ವರದಕ್ಷಿಣೆಗಾಗಿ ನಡೆಯುವ ದೌರ್ಜನ್ಯ, ಅತ್ಯಾಚಾರ, ಕೊಲೆ, ಮಕ್ಕಳ ಮೇಲೆ ನಡೆಯುವ ಲೈಂಗಿಕ ಹಿಂಸೆ ಹೀಗೆ ಮುಂತಾದ ಪ್ರಕರಣಗಳನ್ನು ಕೈಗೆತ್ತಿಕೊಂಡು ಉಗ್ರವಾಗಿ ಹೋರಾಟ ಮಾಡುತ್ತಿದ್ದಾರೆ.

ದುಡಿಯುವ ಜನರ ಕೈಗಳಿಗೆ ಕೆಲಸಕ್ಕಾಗಿ ನಿರಂತರ ಹೋರಾಟಗಳಲ್ಲಿ ಭಾಗಿಯಾಗಿ, ಉದ್ಯೋಗ ಮೂಲಭೂತ ಹಕ್ಕಾಗಬೇಕು ಎಂದು ಚಳುವಳಿ ಸಂಘಟಿಸಿದರು. 2005ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು ಜಾರಿಯಾಯಿತು. ಬೀದರ ಜಿಲ್ಲೆಯ ಜವಾಬ್ದಾರಿ ವಹಿಸಿಕೊಂಡು ಅನೇಕ ಗ್ರಾಮಗಳಲ್ಲಿ ಕೃಷಿ ಕೂಲಿಕಾರರನ್ನು ಸಂಘಟಿಸಿ ಜಾಗೃತ ಸಮಾವೇಶಗಳು, ಹೋರಾಟಗಳನ್ನು ಹಮ್ಮಿಕೊಂಡರು 2009ರಲ್ಲಿ ಬೀದರನಲ್ಲಿ ಸುಮಾರು ಹತ್ತು ಸಾವಿರದಷ್ಟು ಕೃಷಿ ಕೂಲಿಕಾರರನ್ನು ಬರದ ವಿರುದ್ಧ ಮತ್ತು ಕೆಲಸಕ್ಕಾಗಿ ಅಣಿನೆರಸಲು ಸಾಧ್ಯವಾಗಿದೆ. ಹೀಗೆ ಜಿಲ್ಲೆಯಲ್ಲಿ ಸಾವಿರಾರು ಮಹಿಳೆಯರು ಹೇಗೋ ಕಾನೂನು ಪ್ರಜ್ಞೆಯನ್ನು ಪಡೆದು ಸ್ವತಃ ಹೋರಾಡುತ್ತಿರುವುದು ಬಹಳ ಹೆಮ್ಮೆಯ ಸಂಗತಿ ಎಂದು ಹೇಳಬಹುದಾಗಿದೆ.

**ಸಾಮಾಜಿಕ ಸೇವೆ**

1989 ಮಾರ್ಚ 22ರಂದು ಕೆ. ನೀಲಾ ಅವರು, ಡೆಮಾಕ್ರೆಟಿಸ್, ಪ್ರಮೆನ್ಸ್ ಆಸೋಶಿಯೇಷನ್ ಪಾರಂಭ ಮಾಡಿದರು. ಜೂನ್ 11ಕ್ಕೆ ಮೊದಲನೆ ಬಹುದೊಡ್ಡ ಹೋರಾಟ ಅತ್ಯಂತ ಪ್ರಮಾಣದಲ್ಲಿ ಮಾಡಿದರು. ಬೀದರನ ಶಾಹಗಂಜ್ ಸ್ಲಂ ಏರಿಯಾದಲ್ಲಿ ಅತ್ಯಂತ ರಭಸದಿಂದ ಮಳೆ ಸುರಿದು ನೀರು ತುಂಬಿ ಹೋಗಿತ್ತು. ಆ ನೀರಿನಲ್ಲಿ ಒಂದು ಪುಟ್ಟ ಮಗು ಬಿದ್ದು ಸತ್ತು ಹೋಗಿತ್ತು. ಚಿತ್ತಮ್ಮ ಎನ್ನುವವರು ಅಲ್ಲಿನ ಅಂಗನವಾಡಿ ಕೇಂದ್ರದ ಶಿಕ್ಷಕರಾಗಿದ್ದು, ಹಾಗೂ ಎಲ್ಲರನ್ನು ಒಟ್ಟಿಗೆ ಸೇರಿಸಿಕೊಂಡು ಹೋರಾಟ ಮಾಡಿ ತಕ್ಷಣವೇ ನೀರು ತೆಗೆಸಿ ಅಲ್ಲಿನ ಜನರಿಗೆ ಬೇರೆ ಕಡೆ ವಸತಿ ವ್ಯವಸ್ಥೆ ಮಾಡಿಸಿದರು. ಹಾಗೆಯೇ ಕೆಲವು ದಿನಗಳ ನಂತರ ಬಸವಕಲ್ಯಾಣ ತಾಲ್ಲೂಕಿನ ಯೆನಗಾಹಳ್ಳಿಯ ಒಬ್ಬ ಹೆಣ್ಣು ಮಗಳ ಗಂಡ ಕುಡಿದು ಸಾಲ ಮಾಡಿದನು. ಕಾರಣ ಸಾಲ ಕೊಟ್ಟವರು ಆ ಸಾಲ ತೀರಿಸಲಾಗದ ಮಹಿಳೆಯನ್ನು ಗಿಡಕ್ಕೆ ಕಟ್ಟಿಹಾಕಿ ಹೊಡೆದಿದ್ದರು. ಈ ವಿಷಯ ಕೆ ನೀರಾ ಅವರಿಗೆ ಗೊತ್ತಾದಾಗ ಆ ಮಹಿಳೆಯನ್ನು ಮತ್ತು ಸುತ್ತಮುತ್ತಲಿನಲ್ಲಿ ಇರುವ ಎರಡು ಮೂರು ಜನ ಮಹಿಳೆಯರನ್ನು ಕರೆದುಕೊಂಡು ಎಸ್.ಪಿ. ಕಛೇರಿಗೆ ಹೋಗಿ ಅರ್ಜಿಯನ್ನು ಕೊಟ್ಟರು. ಹಾಗೂ ಒಂದು ಪತ್ರ ಬರೆದು ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಕೊಡಲಾಗಿದೆ. ಮತ್ತೆ ಕೆಲವು ದಿನಗಳ ನಂತರ ಸಾಕ್ಷರತೆಯೊಳಗೆ ಕೆಲಸಕ್ಕೆ ಸೇರಿಕೊಂಡರು. ಗಾಮ ಪಂಚಾಯತಿಯ ನೌಕರರ ಸಂಘ ಪ್ರಾರಂಭವಾಗಿತ್ತು. ಗಾಮ ಪಂಚಾಯತಿಯ ನೌಕರರ ಸಂಬಳ ಹೆಚ್ಚಿಸಬೇಕೆಂದು 40 ದಿನಗಳ ನಿರಂತರ ಹೋರಾಟ ಮಾಡಲಾಯಿತು. ಆಗ ಐ.ಎ.ಎಸ್. ಅಧಿಕಾರಿಯಾದ ರವಿಕುಮಾರ ಇದ್ದರು. ಕೊನೆಗೆ ಸಂಬಳ ಹೆಚ್ಚಿಸಿದ್ದಕ್ಕಾಗಿ ಎಲ್ಲಾ ನೌಕರರು ಒಟ್ಟಿಗೆ ಸೇರಿಕೊಂಡು ಕೆ. ನೀಲಾ ಅವರನ್ನು ಗ್ರಾಮ ಪಂಚಾಯಿತಿಯ ಸಂಘಕ್ಕೆ ಗೌರವಾಧ್ಯಕ್ಷೆಯನ್ನಾಗಿ ನೇಮಕ ಮಾಡಿದರು. ಹೀಗಾಗಿ ಕೆ. ನೀಲಾ ಅವರು ಸಮಾಜ ಸೇವೆಗೆ ಅವರು ಸಲ್ಲಿಸಿದ ಸೇವೆಯು ತುಂಬಾ ಅಪಾರವಾದದ್ದು ಎಂದು ಹೇಳಲಾಗಿದೆ.

**ಸಾಹಿತ್ಯಕ ಸೇವೆ**

ಕೆ. ನೀಲಾ ಅವರ ಸಾಹಿತ್ಯಕ ಸೇವೆಯ ಪ್ರಮುಖ ಕೃತಿಗಳು ಬದುಕು ಬಂದೀಖಾನ (2001,ಮಹಿಳೆ–ಶೋಷಣೆಯ ನೆಲೆಗಳು (2005), ಜ್ಯೋತಿಯೊಳಗಣ ಕಾಂತಿ (ಕಥಾ ಸಂಕಲನ) (2009),ನೆಲದ ಪಿಸು ಮಾತು (2009) 5. ನೆಲದ ನಂಟು (ಸಂಪಾದನೆ) (2010),ತಿಪ್ಪೆಯನರಸಿ ಮತ್ತು ಇತರೆ ಕಥೆಗಳು (ಕಥಾ ಸಂಕಲನ) (2010), ರೈಲು ಚಿತ್ರಗಳು (ಪ್ರವಾಸ ಕಥನ) ಅಪ್ರಕಟಿತ ಕೃತಿ. ಬಾಳೆ ಕೌದಿ ಮೇಲೆ ದಾಳಿ, ಭಾರತದ ಮೇಲೆ ದಾಳಿ (ಸಂಪಾದನೆ) (2016),ಬದುಕು ಬೀದಿಯ ಪಯಣ (ಕವನ ಸಂಕಲನ) (1995) ಮುಂತಾದ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಸಮ್ಮೇಳನ ಕಾರ್ಯಕ್ರಮಗಳಲ್ಲಿ ಭಾಗವಹಿಸಿ 2013, ನವೆಂಬರ್ ಎರಡು ದಿನಗಳ ಕಾಲ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜಿಲ್ಲಾ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷೆ ವಹಿಸಿಕೊಂಡರು.

ಒಟ್ಟಾರೆಯಾಗಿ ಕೆ.ನೀಲಾ ಅವರು ಹೊಸಗನ್ನಡ ಸಾಹಿತ್ಯದಲ್ಲಿ ಸಾಹಿತ್ಯ ಕೃಷಿಯನ್ನು ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡು ವಿಶಿಷ್ಟವಾದ ಸಾಧನೆಯ ಮೂಲಕ ಸಾಹಿತ ಶಿಖರವನ್ನೇರಿದ ಕೆ. ನೀಲಾ ಅವರ ಜೀವನ ಮತ್ತು ಸಾಧನೆಯು ಅತಿ ಮುಖ್ಯವಾಗಿದೆ ಎನ್ನುವುದಕ್ಕೆ ಈ ಮೇಲಿನ ಅಂಶಗಳು ಸಾಕ್ಷಿಯಾಗಿವೆ. ಕೆ. ನೀಲಾರವರು ಮಹಿಳಾ ಪ್ರಗತಿಪರ ಚಿಂತಕರಾಗಿ, ಲೇಖಕರಾಗಿ, ಕಥೆಗಾರ್ತಿಯಾಗಿ ಮತ್ತು

ಚಿಂತಕರಾಗಿ ಸಾಮಾಜಿಕ ಕಳಕಳಿಯ ಸರಳ ಜೀವಿ, ಹೀಗಾಗಿ ಇವರು ಕನ್ನಡ ಸಾರಸ್ವತ ಸಾಹಿತ್ಯ ಲೋಕಕ್ಕೆ ದುಡಿದವರಲ್ಲಿ ಒಬ್ಬರು. ಇವರು ಕೆಲವು ಕೃತಿಗಳನ್ನು ಕನ್ನಡ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಕೃಷಿಗೈದು, ದುಡಿದವವರು. ಅವರ ಜೀವನ ಮತ್ತು ಸಾಧನೆಯು ಅತ್ಯಂತ ಮಹತ್ವಪೂರ್ಣವಾಗಿದೆ. ಇವರ ಸಾಧನೆಗಾಗಿ ಸನ್ಮಾನ ಮತ್ತು ಪ್ರಶಸ್ತಿಗಳು ಬಂದಿವೆ. ಅವು **'ಕೊಂದಹರುಳಿದರೆ'** ಎಂಬ ಕಥೆಗೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ರಾಜಪುರೋಹಿತ ದತ್ತಿ ಪುರಸ್ಕಾರ, ಚಿನ್ನದ ಪದಕದೊಂದಿಗೆ ಪ್ರಥಮ ಬಹುಮಾನ. 'ಮತಳಾ' ಕತೆ 2008 ರಲ್ಲಿ ದೀಪಾವಳಿ ವಿಶೇಷಾಂಕದ ಕಥಾ ಸ್ಪರ್ಧೆಯಲ್ಲಿ ಅತ್ಯಂತ ಮೆಚ್ಚುಗೆ ಪಡೆದುಕೊಂಡಿದೆ.'ನೆಲ ತಳವಾರನಾದರೆ' ಕತೆ, 2009ರಲ್ಲಿ ದೀಪಾವಳಿ ವಿಶೇಷಾಂಕದ ಕಥಾ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದುಕೊಂಡಿದೆ. ನಲದ ಪಿಸುಮಾತು' ಕೃತಿಗೆ 2009ರಲ್ಲಿ ಮಾತೋಶ್ರೀ ಮಹಾದೇವಮ್ಮ ನಾಗಪ್ಪ ಮುನ್ನೂರು ಪ್ರತಿಷ್ಠಾನದಿಂದ ಅಮ್ಮ ಪ್ರಶಸ್ತಿ ಪಡೆದುಕೊಂಡಿದೆ.'ತಿಪ್ಪೆಯನರಸಿ' ಕೃತಿಗೆ 2010 ರಲ್ಲಿ ಪ್ರಜಾವಾಣಿ, ದೀಪಾವಳಿ ಸಂಭ್ರಮದ ಕಥಾ ಸ್ಪರ್ಧೆಯಲ್ಲಿ ಎರಡನೆ ಬಹುಮಾನ ಪಡೆದುಕೊಂಡಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ನೀಲಾ ಕೆ. (2009). *ಜ್ಯೋತಿಯೊಳಗಣ ಕಾಂತಿ.* ಕ್ರಿಯಾ ಪ್ರಕಾಶನ.
- ನೀಲಾ ಕೆ. (2009). *ಬದುಕು ಬಂದೀಖಾನೆ.* ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ.
- ನೀಲಾ ಕೆ. (2016). *ಜೆ ಎನ್ ಯು ಮೇಲೆ ದಾಳಿ ಭಾರತದ ಮೇಲೆ ದಾಳಿ.* ಕ್ರಿಯಾ ಪ್ರಕಾಶನ.
- ನೀಲಾ ಕೆ. (2014). *ಬಾಳಕೌದಿ.* ಪಲ್ಲವ ಪ್ರಕಾಶನ.